ರಾಜ್ಯದಲ್ಲಿರುವ ವೈದ್ಯಕೀಯ ಕಾಲೇಜುಗಳ ಬಗ್ಗೆ

೭೧. ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಎಷ್ಟು ಮತ್ತು ಇವುಗಳಲ್ಲಿ ವಿದ್ಯಾರ್ಥಿಗಳ ಪ್ರವೇಶಾವಕಾಶದ ಸಂಖ್ಯೆ ಎಷ್ಟು ?

ಆ) ಮೇಲ್ಕಂಡ ಸೀಟುಗಳಲ್ಲಿ ಸರ್ಕಾರದ ಕೋಟಾ ಮ್ಯಾನೇಜ್‌ಮೆಂಟ್‌ರವರ ಕೋಟಾವೆಷ್ಟು ?

ಇ) ಮೇಲ್ಕಂಡ ಕಾಲೇಜುಗಳಲ್ಲಿ ಭಾರತದ ವೈದ್ಯಕೀಯ ಮಂಡಳಿಯ ಮಾನ್ಯತೆ ಪಡೆಯದ ಕಾಲೇಜ್‌ಗಳ ಸಂಖ್ಯೆ ಎಷ್ಟು ?

(ಈ) ರಾಜ್ಯದಲ್ಲಿ ಹೊಸ ಮೆಡಿಕಲ್ ಕಾಲೇಜುಗಳನ್ನು ತೆರೆಯಲು ಮಂಜೂರಾತಿ ನೀಡಲಾಗುವುದೇ ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು).—

ಅ) ಕಾಲೇಜುಗಳ ಸಂಖ್ಯೆ.

ಸರ್ಕಾರಿ ಕಾಲೇಜುಗಳು	...	೪
ಖಾಸಗಿ ಕಾಲೇಜುಗಳು	...	೧೪
ಒಟ್ಟು	...	೧೮

ವಿದ್ಯಾರ್ಥಿಗಳ ಸಂಖ್ಯೆ	...	೨೮೫೦
ಆ) ಸರ್ಕಾರದವರ ಕೋಟಾ	...	೧೦೧೫
ಮ್ಯಾನೇಜ್‌ಮೆಂಟ್ ಕೋಟಾ	...	೧೮೩೫

ಇ) ೬

ಈ) ಇಲ್ಲ.

ಹಾಸನದ ಜಿಲ್ಲಾ ಆಸ್ಪತ್ರೆಯಲ್ಲಿ " ಡಿಸ್ಪಿಲ್ಡ್ ವಾಟರ್ " ತಯಾರಿಸುವ ಘಟಕವನ್ನು ಪ್ರಾರಂಭಿಸುವ ಬಗ್ಗೆ

೮೩. ಶ್ರೀ ಕೆ. ಹೆಜ್. ಹನುಮೇಗೌಡ (ಹಾಸನ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಾಸನದ ಜಿಲ್ಲಾ ಆಸ್ಪತ್ರೆಯಲ್ಲಿ ರೋಗಿಗಳ ಅನುಕೂಲಕ್ಕಾಗಿ ಡಿಸ್ಟಿಲ್ಡ್ ವಾಟರ್ ತಯಾರಿಸುವ ಘಟಕವನ್ನು ಪ್ರಾರಂಭಿಸಲಾಗುವುದೇ ?

ಆ) ಇದಕ್ಕೆ ತಗಲುವ ಖರ್ಚಿನಲ್ಲಿ ಅರ್ಧಭಾಗವನ್ನು ಭರಿಸಲು ಹಾಸನ ಜಿಲ್ಲಾ ಪರಿಷತ್ ನಿರ್ಣಯ ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಈ ಘಟಕವನ್ನು ಎಂದಿನಿಂದ ಪ್ರಾರಂಭಿಸಲಾಗುವುದು ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಸಹಕಾರ ಸಚಿವರು).—

ಅ) ಇಲ್ಲ.

ಅ) ಇಲ್ಲ. ಹಾಸನ ಜಿಲ್ಲಾ ಪರಿಷತ್ತು ರೂ. ೧೦ ಲಕ್ಷಗಳು ಮಾತ್ರ ನೀಡಲು ಮುಂದೆ ಬಂದಿದೆ.

ಇ) ಮೇಲ್ಕಂಡ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಸಹಕಾರಿ ಸಂಸ್ಥೆಗಳಿಗೆ ಬಡ್ಡಿ ರಿಯಾಯಿತಿ ಪಾವತಿ ಮಾಡುವ ಬಗ್ಗೆ.

೧೩೦ ಶ್ರೀ ಜಿ. ಎಸ್. ಆಚಾರ್ (ಬೈಂದೂರು).— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ೧೯೮೭-೮೮ ೧೯೮೮-೮೯ನೇ ಸಾಲುಗಳಲ್ಲಿ ಸಹಕಾರಿ ಸಂಸ್ಥೆಗಳಿಗೆ ಬಡ್ಡಿ ರಿಯಾಯಿತಿ ಧೋರಣೆ ರೀತ್ಯಾ ಎಷ್ಟು ಮೊತ್ತದ ಹಣ ಸರ್ಕಾರದವರು ಮರು ಪಾವತಿ ಮಾಡಬೇಕಾಗಿದೆ.

ಆ) ಮರು ಪಾವತಿ ವಿಳಂಬದಿಂದಾಗಿ ಸಹಕಾರಿ ಸಂಸ್ಥೆಗಳು ನಷ್ಟಕ್ಕೆ ಈಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಹಣ ಮರು ಪಾವತಿಗೆ ಶೀಘ್ರ ಕ್ರಮ ಕೈಗೊಳ್ಳಲಾಗುವುದೇ?

ಶ್ರೀಮತಿ ಮನೋರಮ ಮಾಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ಸಹಕಾರ ಸಚಿವೆಯವರು).—

ಅ) ೧೯೮೭-೮೮ನೇ ಸಾಲಿನ ಬಾಬ್ತು ೩೬೯.೭೬ ಲಕ್ಷ ರೂ.ಗಳು ಮತ್ತು ೧೯೮೮-೮೯ನೇ ಸಾಲಿನ ಬಾಬ್ತು ೭೫೭.೦೬ ಲಕ್ಷ ರೂ.ಗಳೂ ಒಟ್ಟು ೪೪೦೩.೮೨ ಲಕ್ಷ ರೂ.ಗಳನ್ನು ಸರ್ಕಾರದಿಂದ ಬಿಡುಗಡೆ ಮಾಡಲು ಬಾಕಿ ಇರುತ್ತದೆ.

ಆ) ಬಂದಿರುತ್ತದೆ. ಸಹಕಾರಿ ಸಂಸ್ಥೆಗಳು ಹೀಗೆ ನಷ್ಟಕ್ಕೆ ಈಡಾಗುವುದನ್ನು ನಿವಾರಿಸುವ ಸಲುವಾಗಿ ೧೯೮೭-೮೮ನೇ ಸಾಲಿನ ಬಾಬ್ತು ಬಡ್ಡಿ ಸಹಾಯ ಧನ ಸರ್ಕಾರದಿಂದ ಬಿಡುಗಡೆಯಾಗುವ ಮುನ್ನವೇ ಅದನ್ನು ಲೆಕ್ಕ ಪತ್ರಗಳಲ್ಲಿ ಹೊಂದಾಣಿಕೆ ಮಾಡಿಕೊಳ್ಳುವಂತೆ ಆದೇಶವನ್ನು ನೀಡಲಾಗಿದ್ದಿತು.

ಇ) ೧೯೮೭-೮೮ನೇ ಸಾಲಿನ ಬಾಬ್ತು ದೀರ್ಘಾವಧಿ ಸಾಲಗಳ ಬಾಬ್ತು ನೀಡಬೇಕಾಗಿದ್ದು ೩೦೧೪.೦೦ ಲಕ್ಷ ರೂ.ಗಳನ್ನು ಮತ್ತು ಇದೇ ಬಾಬಿಗೆ ೧೯೮೮-೮೯ನೇ ಸಾಲಿಗೆ ನೀಡಬೇಕಾದ ೩೮೦.೯೪ ಲಕ್ಷ ರೂ.ಗಳನ್ನು ಸಂಪೂರ್ಣವಾಗಿ ಬಿಡುಗಡೆ ಮಾಡಲಾಗಿರುತ್ತದೆ. ೧೯೮೭-೮೮ನೇ ಸಾಲಿಗೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಅಲ್ಪಾವಧಿ ಮಧ್ಯಮಾವಧಿ, ಮಧ್ಯಮಾವಧಿ (ಪರಿವರ್ತಿತ) ಸಾಲಗಳ ಬಾಬ್ತು ನೀಡಬೇಕಾದ ೬೬೨೫.೫೭ ಲಕ್ಷ ರೂ.ಗಳ ಪೈಕಿ ೫೯೨೪.೮೧ ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಪ್ರಾಥಮಿಕ ಕೃಷಿ ಪತ್ತಿನ ಸಂಘಗಳಿಗೆ ೧೯೮೭-೮೮ನೇ ಸಾಲಿನ ಬಾಬ್ತು ನೀಡಲು ಬಾಕಿ ಇರುವ ೩೬೯.೭೬ ಲಕ್ಷ ರೂ.ಗಳೂ ಮತ್ತು ಇದೇ ಸಂಘಗಳಿಗೆ ೧೯೮೮-೮೯ನೇ ಸಾಲಿನ ಬಾಬ್ತು ನೀಡಬೇಕಾಗಿರುವ ೭೦೭.೦೬ ಲಕ್ಷ ರೂ.ಗಳೂ ಸೇರಿದಂತೆ ಒಟ್ಟು ೪೪೦೩.೮೨ ಲಕ್ಷ ರೂ.ಗಳನ್ನು ಶೀಘ್ರವಾಗಿ ಬಿಡುಗಡೆ ಮಾಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಜಿಲ್ಲಾ ಪರಿಷತ್ ಅಧೀನದಲ್ಲಿರುವ ಸರ್ಕಾರಿ ಇಲಾಖೆಗಳು

೧೩೧. ಶ್ರೀ ಪಿ. ಜಿ. ಆರ್. ಸಿಂಧ್ಯಾ (ಕನಕಪುರ).— ಮಾನ್ಯ ಗ್ರಾಮಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಪಶು ಸಂಗೋಪನೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಜಿಲ್ಲಾ ಪರಿಷತ್ ಅಧೀನದಲ್ಲಿ ಯಾವ ಯಾವ ಸರ್ಕಾರಿ ಇಲಾಖೆಗಳಿವೆ?

ಆ) ಯಾವುದಾದರೂ ಹೆಚ್ಚಿನ ಇಲಾಖೆಗಳನ್ನು ನಿರ್ವಹಿಸಲು ಬೇಡಿಕೆ ಬಂದಿದೆಯೇ?

ಇ) ಬಂದಿದ್ದರೆ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?